**ದಿಃ20.09.2024 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಸಲಾಯಿತು.**

ಮುಂದುವರಿದ ಮುಖ್ಯ ವಿಚಾರಣೆ : ಶ್ರೀ. ವಿ.ಹಿ.ಸ.ಸ.ಅ. ರವರಿಂದಃ

ಸಾಕ್ಷಿಯು ಐದು ಹೀರೋ ಹೊಂಡಾ ಗುಡ್ ಲೈಫ್ ಮತ್ತು ಹೀರೋ ಹೊಂಡಾ ಎಕ್ಸ್ ಟೆಂಡ್ ವ್ಯಾರೆಂಟ್ಲಿ ಪುಸ್ತಕಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.89 ರಿಂದ 93 ಎಂದು ಗುರುತಿಸಲಾಯಿತು. ಸಾಕ್ಷಿಯು ಐದು ತಾತ್ಕಾಲಿಕ ರಸೀದಿ ಬುಕ್ಸ್ ಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ನಿಪಿ.94 ರಿಂದ 98 ಎಂದು ಗುರುತಿಸಲಾಯಿತು. ಸಾಕ್ಷಿಯು ಐದು ಪಾಸ್ ಪೋರ್ಟ್ ಪ್ರೊಗಾಮ್ ಕ್ಯಾಶ್ ರಸೀದಿ ಪುಸಕ್ತಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.99 ರಿಂದ 103 ಎಂದು ಗುರುತಿಸಲಾಯಿತು. ಸಾಕ್ಷಿಯು ಐದು ಅಡ್ವಾನ್ಸ್ ಪೇಮಂಟ್ ಬುಕ್ಸ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.104 ರಿಂದ 108 ಎಂದು ಗುರುತಿಸಲಾಯಿತು. ಸಾಕ್ಷಿಯು ಐದು ರಸೀದಿ ಬುಕ್ಸ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.109 ರಿಂದ 113 ಎಂದು ಗುರುತಿಸಲಾಯಿತು. ಸಾಕ್ಷಿಯು ಐದು ಅಕ್ಸಿಸರಿ ರಸೀದಿ ಬುಕ್ಸ್ ಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.114 ರಿಂದ 118 ಎಂದು ಗುರುತಿಸಲಾಯಿತು. ನಿಪಿ.89 ರಿಂದ 118 ಬುಕ್ಸ್ ಗಳಲ್ಲಿರುವ ರಸೀದಿಗಳಿಗೆ ಒಂದು ಮತ್ತು ಎರಡನೇ ಆರೋಪಿತರು ಸಹಿ ಮಾಡಿರುತ್ತಾರೆ. ಒಂದನೇ ಆರೋಪಿಯು

-18-

ಮುಖ್ಯ ಕ್ಯಾಶಿಯರ್ ಆಗಿದ್ದು ಎರಡನೇ ಆರೋಪಿಯು ಅಕೌಂಟ್ ಪ್ರಭಾರ ಅಕೌಂಟೆಂಟ್ ಮತ್ತು ಜನರಲ್ ಮ್ಯಾನೇಜರ್ ಆಗಿ ಮ್ಯಾಕ್ಸ್ ಮೋಟಾರ್ಸ್ ನ ಸಂಪೂರ್ಣ ಉಸ್ತುವರಿ ಯನ್ನು ನೋಡಿಕೊಳ್ಳುತ್ತಿದ್ದರು. ಸಾಕ್ಷಿಯು ನ್ಯಾಯಾಲಯದ ಮುಂದೆ ಹಾಜರಿರುವ ಒಂದನೇ ಆರೋಪಿಯನ್ನು ನೋಡಿ ಗುರುತಿಸಿದ್ದು, ಎರಡನೇ ಆರೋಪಿಯು ಗೈರು ಹಾಜರಿದ್ದು ಅವರ ಪರ ವಕೀಲರು ಗುರುತಿಸುವಿಕೆಗೆ ಯಾವುದೇ ತಕರಾರು ಇಲ್ಲ ಎಂದು ಹೇಳುತ್ತಾರೆ.

**ಪಾಟಿಸವಾಲುಃ ಶ್ರೀಮತಿ.ಎಲ್ ಕೆ. ರವರಿಂದ ಎರಡನೇ ಅರೋಪಿ ವಕೀಲರಿಂದ ಮತ್ತು ಶ್ರೀಮತಿ.ಎ.ಆರ್ ರವರಿಂದ ಒಂದನೇ ಆರೋಪಿ ಪರ ವಕೀಲರು ಕಾಲವಕಾಶ ಕೋರಿದ್ದು ಕಾಲವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯತ್ತು.)

**ಓ.ಹೇ.ಕೇ.ಸ.ಇದೆ**

**3ನೇ ಎ.ಸಿ.ಜೆ.ಎಂ. ನ್ಯಾಯೂಲಯ.**
**ಬೆಂಗಳೂರು.**